# All India Radio: Bangalore
# National Bulletin In Kannada
# 05.02.2026  07.35 a.m.

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**05.02.2026  07.35 a.m.**

**<><><><>**

ಮುಖ್ಯಾಂಶಗಳು

1. ಭಾರತ-ಅಮೆರಿಕ ವ್ಯಾಪಾರ ಒಪ್ಪಂದ : ರಸಗೊಬ್ಬರ ಮತ್ತು ಕೃಷಿಯಂತಹ ಸೂಕ್ಷ್ಮ ವಲಯಗಳ ಬಗ್ಗೆ ಕಾಳಜಿ - ಸಚಿವ ಪಿಯೂಷ್ ಗೋಯಲ್
2. ಇದೇ ೭ರಿಂದ ಪ್ರದಾನಿ ನರೇಂದ್ರ ಮೋದಿ ಮಲೇಷಿಯಾ ಪ್ರವಾಸ
3. ಕೇಂದ್ರ ಸಹಕಾರ ಸಚಿವ ಅಮಿತ್ ಶಾ ದೆಹಲಿಯಲ್ಲಿಂದು ಭಾರತ್ ಟ್ಯಾಕ್ಸಿಗೆ ಚಾಲನೆ
4. ನಿರ್ಣಾಯಕ ಖನಿಜಗಳ ಸವಾಲು ಎದುರಿಸಲು ಅಂತಾರಾಷ್ಟ್ರೀಯ ಸಹಕಾರ ಅಗತ್ಯ - ಡಾ.ಎಸ್.ಜೈಶಂಕರ್
5. ೧೯ ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ; ಫೈನಲ್‌ಗೇರಿದ ಭಾರತ ; ನಾಳೆ ಪ್ರಶಸ್ತಿಗಾಗಿ ಇಂಗ್ಲೆಂಡ್ ವಿರುದ್ಧ ಸೆಣಸು

<><><><>

ಭಾರತ-ಅಮೆರಿಕ ವ್ಯಾಪಾರ ಒಪ್ಪಂದದಲ್ಲಿ ಭಾರತ ಸರ್ಕಾರವು ರಸಗೊಬ್ಬರ ಮತ್ತು ಕೃಷಿಯಂತಹ ಸೂಕ್ಷ್ಮ ಕ್ಷೇತ್ರಗಳನ್ನು ಕಾಳಜಿ ವಹಿಸಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಸ್ಪಷ್ಟಪಡಿಸಿದ್ದಾರೆ. ರಾಜ್ಯಸಭೆಯಲ್ಲಿ ಹೇಳಿಕೆ ನೀಡಿದ ಪಿಯೂಷ್ ಗೋಯಲ್, ಈ ಒಪ್ಪಂದವು ಅತಿ ಸಣ್ಣ, ಸಣ್ಣ ಮತ್ತು ಕೈಗಾರಿಕೆ- ಎಂಎಸ್‌ಎಂಇಗಳು, ಕೈಗಾರಿಕೋದ್ಯಮಿಗಳು, ಕೌಶಲ್ಯಪೂರ್ಣ ಕಾರ್ಮಿಕರು ಮತ್ತು ಕೈಗಾರಿಕೆಗಳಿಗೆ ಹೊಸ ಅವಕಾಶಗಳನ್ನು ಒದಗಿಸುತ್ತದೆ ಎಂದು ಹೇಳಿದರು. ಈ ಒಪ್ಪಂದವು ಉತ್ಪಾದನೆಯನ್ನು ಬಲಪಡಿಸಲು, ಉದ್ಯೋಗಾವಕಾಶಗಳನ್ನು ವಿಸ್ತರಿಸಲು ಮತ್ತು ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸಲು ವೇಗವರ್ಧಕವಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಎರಡೂ ರಾಷ್ಟ್ರಗಳಿಗೆ ಹೊಸ ವ್ಯಾಪಾರ ಮಾರ್ಗಗಳನ್ನು ತೆರೆಯುತ್ತದೆ. ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದ ಪ್ರಮುಖ ಪ್ರಕ್ರಿಯೆಗಳನ್ನು ಪೂರೈಸಲು ಮತ್ತು ದಾಖಲೆಗಳನ್ನು ಅಂತಿಮಗೊಳಿಸಲು ಉಭಯ ರಾಷ್ಟ್ರಗಳು

ಒಗ್ಗೂಡಿ ಕೆಲಸ ಮಾಡಲಿವೆ ಎಂದು ಗೋಯಲ್ ಹೇಳಿದರು. ಎಲ್ಲಾ ಪ್ರಕ್ರಿಯೆಗಳ ಮುಕ್ತಾಯದ ನಂತರ ಒಪ್ಪಂದದ ವಿವರಗಳನ್ನು ಶೀಘ್ರದಲ್ಲೇ ಘೋಷಿಸಲಾಗುವುದು ಎಂದು ಅವರು ಮಾಹಿತಿ ನೀಡಿದರು.

**ಧ್ವನಿ: ಪಿಯೂಷ್ ಗೋಯಲ್ (೩೦ ಸೆಕೆಂಡ್‌ಗಳು)**

೧೪೦ ಕೋಟಿ ಭಾರತೀಯರ ಇಂಧನ ಅವಶ್ಯಕತೆಗಳನ್ನು ರಕ್ಷಿಸುವುದು ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ಅತಿದೊಡ್ಡ ಆದ್ಯತೆಯಾಗಿದೆ ಎಂದು ಪಿಯೂಷ್ ಗೋಯಲ್ ಸ್ಪಷ್ಟಪಡಿಸಿದರು. ಅಮೆರಿಕಾ ಅಧ್ಯಕ್ಷ ಟ್ರಂಪ್ ಅಮೆರಿಕಕ್ಕೆ ಭಾರತೀಯ ರಫ್ತಿನ ಮೇಲಿನ ಸುಂಕವನ್ನು ಶೇ.೧೮ಕ್ಕೆ ಇಳಿಸುವುದಾಗಿ ಘೋಷಿಸಿದ್ದಾರೆ, ಇದು ಅನೇಕ ಸ್ಪರ್ಧಾತ್ಮಕ ದೇಶಗಳ ಮೇಲೆ ಅಮೆರಿಕ ವಿಧಿಸಿರುವ ಸುಂಕಗಳಿಗಿಂತ ಕಡಿಮೆಯಾಗಿದೆ. ಇದು ಅಮೆರಿಕದ ಮಾರುಕಟ್ಟೆಯಲ್ಲಿ ಭಾರತದ ರಫ್ತು ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುತ್ತದೆ ಎಂದು ಅವರು ಹೇಳಿದರು.

<><><><>

ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂಆಹ್ವಾನದ ಮೇರೆಗೆ ಪ್ರಧಾನಿ ನರೇಂದ್ರ ಮೋದಿ ಇದೇ ೭ ರಿಂದ ೮ ರವರೆಗೆ ಮಲೇಷ್ಯಾಕ್ಕೆ ಅಧಿಕೃತ ಭೇಟಿ ನೀಡಲಿದ್ದಾರೆ. ಇದು ಪ್ರಧಾನಿ ಅವರ ಮೂರನೇ ಮಲೇಷ್ಯಾ ಭೇಟಿಯಾಗಿದೆ. ಆಗಸ್ಟ್ ೨೦೨೪ ರಲ್ಲಿ ಭಾರತ-ಮಲೇಷ್ಯಾ ದ್ವಿಪಕ್ಷೀಯ ಸಂಬಂಧವನ್ನು 'ಸಮಗ್ರ ಕಾರ್ಯತಂತ್ರದ ಪಾಲುದಾರಿಕೆ' ಮಟ್ಟಕ್ಕೆ ಏರಿಕೆ ಮಾಡಿದ ನಂತರ ಇದು ಮೊದಲನೆಯದು. ಮಲೇಷ್ಯಾ ಭೇಟಿಯ ಸಮಯದಲ್ಲಿ, ಪ್ರಧಾನಿಯ ದ್ವಿಪಕ್ಷೀಯ ಚರ್ಚೆಗಳನ್ನು ನಡೆಸಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ. ಪ್ರಧಾನಿ ಮೋದಿ ಭಾರತೀಯ ಸಮುದಾಯದ ಸದಸ್ಯರು ಹಾಗೂ ಕೈಗಾರಿಕೆ ಮತ್ತು ವ್ಯಾಪಾರ ಪ್ರತಿನಿಧಿಗಳೊಂದಿಗೆ ಸಹ ಸಂವಾದ ನಡೆಸಲಿದ್ದಾರೆ. ಭಾರತ ಮತ್ತು ಮಲೇಷ್ಯಾ ಐತಿಹಾಸಿಕ, ನಾಗರಿಕ ಮತ್ತು ಸಾಂಸ್ಕೃತಿಕ ಸಂಪರ್ಕಗಳ ಆಧಾರದ ಮೇಲೆ ದೀರ್ಘಕಾಲದ ಸ್ನೇಹದ ಬಂಧಗಳನ್ನು ಹಂಚಿಕೊಳ್ಳುತ್ತವೆ. ಮಲೇಷ್ಯಾದಲ್ಲಿ ೨.೯ ಮಿಲಿಯನ್ ಭಾರತೀಯ ವಲಸಿಗರ ನೆಲೆಸಿರುವುದರಿಂದ ಉಭಯ ದೇಶಗಳ ಸಂಬಂಧವು ಮತ್ತಷ್ಟು ಬಲಗೊಂಡಿದೆ.

<><><><>

ಒಡಿಶಾ ಪ್ರವಾಸದಲ್ಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಇಂದು ತಮ್ಮ ತವರು ಜಿಲ್ಲೆ ಮಯೂರ್ ಬಂಜ್‌ನಲ್ಲಿ ಸಂಜೆ ಸಿಮಿಲಿಪಾಲ್ ಹುಲಿ ಸಂರಕ್ಷಣಾ ಪ್ರದೇಶಕ್ಕೆ ಭೇಟಿ ನೀಡಲಿದ್ದಾರೆ. ಆರು ದಿನಗಳ

ಪ್ರವಾಸ ಕೈಗೊಂಡಿರುವ ಅವರು, ಶನೇ ದಿನವಾದ ಇಂದು ಬೆಳಗ್ಗೆ  ರಾಯ್‌ರಂಗಾಪುರದ ಶ್ರೀಜಗನ್ನಾಥ ದೇವಾಲಯಕ್ಕೆ ಭೇಟಿ ನೀಡಿ, ವಿಶೇಷ ಪೂಜೆ ಹಾಗೂ ಪ್ರಾರ್ಥನೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ನಂತರ ಅವರು, ತಮ್ಮ ಸ್ವಗ್ರಾಮ ಪಹದ್ಪುರ್‌ನಲ್ಲಿ ಎಸ್‌ಎಲ್‌ಎಸ್ ಸ್ಮಾರಕ ಶಾಲೆಯ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಲಿದ್ದಾರೆ.

<><><>

ರಾಜ್ಯಸಭೆಯಲ್ಲಿ ರಾಷ್ಟ್ರಪತಿಗಳ ಭಾಷಣದ ಮೇಲಿನ ವಂದನಾ ನಿರ್ಣಯದ ಕುರಿತ ಚರ್ಚೆ ಪುನಾರಂಭವಾಗಿದೆ.  ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಕೇಂದ್ರ ಸಚಿವ ಹಾಗೂ ಸಭಾ ನಾಯಕ ಜೆ.ಪಿ.ನಡ್ಡಾ, ರಾಷ್ಟ್ರಪತಿಯವರ ಭಾಷಣದಲ್ಲಿ ಭಾರತದ ಪ್ರಗತಿಯ ಯಶೋಗಾಥೆಯ ಚಿತ್ರಣವನ್ನು ಕಟ್ಟಿಕೊಡಲಾಗಿದೆ. ಅದರಲ್ಲಿ ನರೇಂದ್ರ ಮೋದಿ ಸರ್ಕಾರದ ಸಾಧನೆಗಳು ಹಾಗೂ ಅಮೃತ ಕಾಲದಲ್ಲಿ ಕೈಗೊಂಡಿರುವ ಉಪಕ್ರಮಗಳು ಒಳಗೊಂಡಿವೆ. ಸರ್ಕಾರದ ಕ್ರಮಗಳಿಂದಾಗಿ ಭಾರತ ಜಗತ್ತಿನ ಅತ್ಯಂತ ವೇಗದ ಆರ್ಥಿಕತೆಯಾಗಿ ಬೆಳವಣಿಗೆ ಹೊಂದಿದೆ ಎಂದರು. ಸರ್ಕಾರ ಸುಧಾರಣೆ, ಸಾಧನೆ ಮತ್ತು ಪರಿವರ್ತನೆಯ ದೂರದೃಷ್ಟಿಯೊಂದಿಗೆ ಕಾರ್ಯ ನಿರ್ವಹಿಸುತ್ತಿದ್ದು, ೨೦೪೭ರ ವೇಳೆಗೆ ವಿಕಸಿತ ಭಾರತ ಗುರಿ ಸಾಧನೆ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳನ್ನು ಹಾಗೂ ಶತಮಾನಗಳಷ್ಟು ಹಳೆಯದಾದ ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯ ಕುರಿತು ರಾಷ್ಟ್ರಪತಿಯವರು ತಮ್ಮ ಭಾಷಣದಲ್ಲಿ ವಿವರವಾದ ಉಲ್ಲೇಖವನ್ನು ಮಾಡಿದ್ದಾರೆ ಎಂದು ನಡ್ಡಾ ತಿಳಿಸಿದ್ದಾರೆ.

<><><>

ದೇಶದ ಸಹಕಾರಿ ವಲಯದ ಬಲವರ್ಧನೆ ಮತ್ತು ನಾಗರಿಕ-ಕೇಂದ್ರಿತ ಸಾರಿಗೆ  ಪರಿಹಾರಗಳನ್ನು ಉತ್ತೇಜಿಸುವಲ್ಲಿ ನಿಟ್ಟಿನಲ್ಲಿ ಕೇಂದ್ರ ಸಹಕಾರ ಸಚಿವ ಅಮಿತ್ ಶಾ ನವದೆಹಲಿಯಲ್ಲಿಂದು ಭಾರತ್ ಟ್ಯಾಕ್ಸಿಗೆ ಚಾಲನೆ ನೀಡಲಿದ್ದಾರೆ.  ಸಹಕಾರಿ ವಲಯದಲ್ಲಿ ಇದು ಮಹತ್ವದ ಮೈಲಿಗಲ್ಲಾಗಲಿದೆ. ಈ ವೇದಿಕೆಯು ಸಾರಥಿಗಳು ಎಂದು ಕರೆಯಲ್ಪಡುವ ಚಾಲಕರನ್ನು ಮಾಲೀಕತ್ವ, ಕಾರ್ಯಾಚರಣೆಗಳು ಮತ್ತು ಮೌಲ್ಯಸೃಷ್ಟಿಯ ಕೇಂದ್ರದಲ್ಲಿರಿಸುತ್ತದೆ ಮತ್ತು ಅಗ್ರಿಗೇಟರ್ ಆಧಾರಿತ ಮಾದರಿಗಳಿಂದ ಅವರನ್ನು ಮುಕ್ತಗೊಳಿಸುತ್ತದೆ ಎಂದು ಸಹಕಾರ ಸಚಿವಾಲಯ ತಿಳಿಸಿದೆ. ಈ ವೇದಿಕೆಯು ಶೂನ್ಯ-ಕಮಿಷನ್ ಮತ್ತು ಸರ್ಜ್-ಮುಕ್ತ ಬೆಲೆ ನಿಗದಿ ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತದೆ, ಚಾಲಕರಿಗೆ ಲಾಭದ ನೇರ ವಿತರಣೆಯೊಂದಿಗೆ. ಆರೋಗ್ಯ ವಿಮೆ, ಅಪಘಾತ ವಿಮೆ, ನಿವೃತ್ತಿ ಉಳಿತಾಯ

ವ್ಯವಸ್ಥೆಯ ಮೂಲಕ ಭಾರತ್ ಟ್ಯಾಕ್ಸಿ ಸಾರಥಿಗಳಿಗೆ ಸಾಮಾಜಿಕ ಭದ್ರತೆಗೆ ಆದ್ಯತೆ ನೀಡುತ್ತದೆ ಎಂದು ಸಚಿವಾಲಯ ಉಲ್ಲೇಖಿಸಿದೆ. ಬೈಕ್ ದೀದಿಯಂತಹ ಉಪಕ್ರಮಗಳನ್ನು ಜಾರಿಗೆ ತರಲಾಗುತ್ತಿದೆ, ಇದರಡಿಯಲ್ಲಿ ಈವರೆಗೆ ನೂರ ಐವತ್ತಕ್ಕೂ ಅಧಿಕ ಮಹಿಳಾ ಚಾಲಕರು ಭಾರತ್ ಟ್ಯಾಕ್ಸಿಗೆ ಸೇರ್ಪಡೆಯಾದ್ದಾರೆಂದು ಸಚಿವಾಲಯ ತಿಳಿಸಿದೆ.

<><><><>

ನಿರ್ಣಾಯಕ ಖನಿಜಗಳ ಅತಿಯಾದ ಸಾಂದ್ರತೆಯ ಸವಾಲುಗಳನ್ನು ಮತ್ತು ರಚನಾತ್ಮಕ ಅಂತಾರಾಷ್ಟ್ರೀಯ ಸಹಕಾರದ ಮೂಲಕ ಅಪಾಯಕಾರಿ ಪೂರೈಕೆ ಸರಣಿಗಳ ಪ್ರಾಮುಖ್ಯತೆಯನ್ನು ವಿದೇಶಾಂಗ ಸಚಿವ ಎಸ್. ಜೈಶಂಕರ್ ಒತ್ತಿ ಹೇಳಿದ್ದಾರೆ. ಕಳೆದ ರಾತ್ರಿ ವಾಷಿಂಗ್ಟನ್ ಡಿಸಿಯಲ್ಲಿ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರು ಆಯೋಜಿಸಿದ್ದ ನಿರ್ಣಾಯಕ ಖನಿಜಗಳ ಸಚಿವರ ಸಭೆಯನ್ನುದ್ದೇಶಿಸಿ ಮಾತನಾಡಿದ ಡಾ. ಜೈಶಂಕರ್, ನಿರ್ಣಾಯಕ ಖನಿಜಗಳ ಮೇಲಿನ ಫೋರ್ಜ್ ಉಪಕ್ರಮಕ್ಕೆ ಭಾರತದ ಬೆಂಬಲವನ್ನು ತಿಳಿಸಿದರು. ಅವರು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ರಾಷ್ಟ್ರೀಯ ನಿರ್ಣಾಯಕ ಖನಿಜಗಳ ಮಿಷನ್, ಅಪರೂಪದ ಭೂಮಿಯ ಕಾರಿಡಾರ್‌ಗಳು ಮತ್ತು ಜವಾಬ್ದಾರಿಯುತ ವಾಣಿಜ್ಯ ಬಳಕೆ ಸೇರಿ ಉಪಕ್ರಮಗಳ ಮೂಲಕ ಹೆಚ್ಚಿನ ಸ್ಥಿತಿಸ್ಥಾಪಕತ್ವದತ್ತ ಭಾರತದ ಪ್ರಯತ್ನಗಳನ್ನು ಪ್ರಮುಖವಾಗಿ ಪ್ರಸ್ತಾಪಿಸಿದ್ದಾಗಿ ತಿಳಿಸಿದ್ದಾರೆ. ಸಚಿವರ ಸಭೆಯ ಆರಂಭದ ಮೊದಲು, ಡಾ. ಜೈಶಂಕರ್ ಅವರು ಕೆನಡಾದ ವಿದೇಶಾಂಗ ಸಚಿವೆ ಅನಿತಾ ಆನಂದ್ ಮತ್ತು ಸಿಂಗಾಪುರದ ವಿವಿಯನ್ ಬಾಲಕೃಷ್ಣನ್ ಸೇರಿದಂತೆ ಹಲವಾರು ಜಾಗತಿಕ ಸಹವರ್ತಿಗಳನ್ನು ಭೇಟಿಯಾದರು. ಅಲ್ಲದೆ, ಜೈಶಂಕರ್ ನೆದರ್ ಲ್ಯಾಂಡ್ಸ್, ಇಟಲಿ, ಮಲೇಷ್ಯಾ, ಬಹ್ರೇನ್, ಮಂಗೋಲಿಯಾ, ಪೋಲೆಂಡ್, ರೊಮೇನಿಯಾ, ಇಸ್ರೇಲ್ ಮತ್ತು ಉಜ್ಬೇಕಿಸ್ತಾನ್ ರಾಷ್ಟ್ರಗಳ ತಮ್ಮ ಸಹವರ್ತಿಗಳೊಂದಿಗೆ ಸಂವಹನ ನಡೆಸಿದರು.

<><><><>

ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ರದ್ದುಗೊಳಿಸಲಾಗಿದೆ ಮತ್ತು ಬಿಜೆಪಿ ಶಾಸಕ ಯುಮ್ನಾಮ್ ಖೇಮ್ಚಂದ್ ಸಿಂಗ್ ಮಣಿಪುರದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಗೃಹ ಸಚಿವಾಲಯವು ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸುವುದಾಗಿ ಅಧಿಸೂಚನೆ ಹೊರಡಿಸಿದೆ. ಹಿಂದಿನ ಮುಖ್ಯಮಂತ್ರಿ ಎನ್.ಬಿರೇನ್‌ಸಿಂಗ್ ರಾಜೀನಾಮೆಯ ನಂತರ ೨೦೨೫ರ ಫೆಬ್ರವರಿ ೧೩, ರಿಂದ ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು

ವಿಧಿಸಲಾಗಿತ್ತು ಮತ್ತು ೨೦೨೭ರ ಮಾರ್ಚ್‌ವರೆಗೆ ಅಧಿಕಾರಾವಧಿಯನ್ನು ಹೊಂದಿರುವ ಮಣಿಪುರ ವಿಧಾನಸಭೆಯನ್ನು ಅಮಾನತಿನಲ್ಲಿರಿಸಲಾಗಿತ್ತು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>